ಕಂಡು ಆ ರೀತಿ ಅಂದಿದ್ದಳು. ಆದರೆ, ಲಕ್ಕಮ್ಮ ತನ್ನ ಮಗಳು ಚುಕ್ಕಿ ನಿದ್ರೆ ಮಾಡುವಾಗ ಕನಸು ಬಿದ್ದು, ಎದ್ದು ಓಡಾಡಿದ್ದನ್ನು, ಕುಳಿತುಕೊಂಡಿದ್ದನ್ನು, ಕನವರಿಸಿಕೊಳ್ಳುವುದನ್ನು ನೋಡಿದ್ದಳು, ಕೇಳಿದ್ದಳು. ಆಗ ಹಾಗೆ ಮಾಡಿದಾಗೆಲ್ಲ, ಅಟ್ಟದಲ್ಲಿಟ್ಟಿದ್ದ ಅಂಚಿನಕಡ್ಡಿಯನ್ನು ತೆಗೆದುಕೊಂಡು ಗೂಡಿನಲ್ಲಿನ ಮಣ್ಣಿನ ಹಣತೆಯ ಪಕ್ಕ ಇರುವ ಬೆಂಕಿಪೊಟ್ಟಣವನ್ನು ತೆಗೆದುಕೊಂಡು, ಗೀರಿ, ಅಂಚಿನಕಡ್ಡಿಗಳ ತುದಿಗೆ ಬೆಂಕಿಯ ತಾಗಿಸಿ, ಅವುಗಳನ್ನು ಹಿಡಿದು, ಚಕ್ಕಳ ಮಕ್ಕಳವಾಗಿ ಮಗಳನ್ನು ಕುಳ್ಳಿರಿಸಿ, ಅವಳ ತಲೆಯಿಂದ ನೆಲದವರೆಗೆ ಮೂರುಸಲ ನೀವಳಿಸಿ ಅದರ ಕಪ್ಪು ಮಸಿಯನ್ನು ಹಣೆಗೆ ಇಟ್ಟು, ಕೆನ್ನೆಗಳಿಗೆ ಸವರುತ್ತಿದ್ದಳು. 'ಸ್ವಪ್ನ ಇಲ್ಲ, ಗಿಪ್ನ ಇಲ್ಲ ಕಣಮ್ಮ' ಎಂದಳು ಚುಕ್ಕಿ. 'ಮತ್ತೆ ಸಡನ್ನಾಗಿ ಯಾಕೆದ್ದೆ ಹಂಗೆ?' ಕೇಳಿದಳು ಲಕ್ಕಮ್ಮ. 'ಪಕ್ಷಿ ಹಿಡಿಯುವ ಸದ್ದಿಗೆ' ಅಂತ ಹೇಳಿದರೆ ಮತ್ತಿನ್ನೇನಾದರೂ ಹೇಳಬಹುದು ಎಂದುಕೊಂಡು, 'ಯಾಕ ಉಗುಳು ನುಂಗಿ ನೆತ್ತಿಗೇರ್ದಂಗಾತು, ಅದ್ಕೆ' ಎಂದು ಸುಳ್ಳು ಹೇಳಿದಳು. 'ಇಲ್ಲಿದ್ದಾಗ ಮೊದಲು ನೀನು ಮನಿಕೆಂಡಾಗ ನಿಟ್ಟು ಬಿದ್ದು ಎಷ್ಟುಸಲ ಎದ್ದು ಕುಕ್ಕಂಡಿಲ್ಲ' ಎಂದಳು. ಅದಕ್ಕೆ ಅವಳ ಮಗಳು ಚುಕ್ಕಿ, 'ಅದೆಲ್ಲ ಮದುವೆಗಿಂತ ಮುಂಚೆ, ಗಂಡನ ಮನೆಗೆ ಹೋದಮೇಲೆ ಕನಸು ಇಲ್ಲ ಯಾತ್ರುದು ಇಲ್ಲ' ಎಂದಳು. 'ನಿನ ಗಂಡ ಪ್ರಸಾದ ಎಂದು ಬತ್ತನಂತೆ, ನಿನ್ನ ಬಿಟ್ಟು ಅದೇ ಹೋದ' ಎಂದು ಕೇಳಿದ್ದಕ್ಕೆ, 'ತೋಟದಾಗೆ ಎಲೆ ಕೊಯ್ಸಿತಿದಾರೆ, ಒಂದು ಚಣನೂ ಪುರ್ಸತ್ತಿಲ್ಲ, ಇವತ್ತ ನಾಳಿಕ್ಕೋ ಬರ್ಬೋದು' ಎಂದಳು ಚುಕ್ಕಿ. ಹತ್ತಿಯನ್ನು ಹೊಸೆಯುತ್ತ, 'ಎಂತದಾದ್ರು ಒಂದು ಹುಳನಾದ್ರು ಹುಟ್ಟಲಿ ಹೊಟ್ಟೆಗೆ, ಈ ಸಲ ಅಮ್ಮನ ಪ್ರಸಾದ ಕೇಳನ' ಲಕ್ಕಮ್ಮ ಅಂದಳು. 'ಅಲ್ಲಿ ಅವ್ರು ಕಾಟ, ಇಲ್ಲಿ ನಿಮ್ದು. ಒಂದೆರಡು ದಿನ ನೆಮ್ಮದಿಯಾಗಿ ಇರಕು ಬಿಡಲ್ಲ.' 'ಎಷ್ಟು ದಿನಾ ಅಮ್ತ?' 'ಅದುನ್ನೇನು ಮಣ್ಣಗೆ ಮಾಡದ? ಆಗಂಗಿದ್ದರೆ ಆಗುತ್ತೆ, ಇಲ್ಲ ಅಂದ್ರೆ ಇಲ್ಲ, ನಾವೇನು ಸುಮ್ಮನೆ ಕುತ್ಕಂಡಿದಿವೇನು?' 'ಬಾಳ ದಿನ ಬಿಡ್ಕಬಾರ್ದು ಕಣೆ. ಬತ್ತ ಬತ್ತ ವಯಸ್ಸು ಬರುತ್ತೇನು, ನೋಡು ಕೂದಲೆಲ್ಲ ನೆರ್ತುಕಮ್ತಿದಿವೆ. ಅಲ್ಲದೆ ಮದುವೆ ಆಗಿ ಐದು ವರ್ಷ ಆಗುತ್ತೆ.' 'ಮುಂದಿನ ವರ್ಷಕ್ಕೆ ಆರಾಗುತ್ತೆ' ಎಂದು ನಕ್ಕಳು ಚುಕ್ಕಿ. 'ನೀನಿನ್ನುವೆ ಹುಡ್ಗಿ ಆಡ್ದಂಗೆ ಆಡ್ತೀಯ, ಜನ ತಲೆಗೊಂದು ಮಾತಾಡ್ಕ್ಯಮ್ತಾರೆ.' 'ಅಂಬರ್ಗೇನು?' 'ಈ ಸಲ ಪ್ರಸಾದ ಕೇಳನ, ಆಗ್ಲಿಲ್ಲ, ಅಂದ್ರೆ, ದೊಡ್ಡಾಸ್ಪತ್ರೆಗೆ ತೋರಿಸ್ಕೆಳ್ರಿ, ನನ್ನಕೈಲಿ ಕಾಯಕಾಗಲ್ಲ. ಬೇಕಾದರೆ ನನ್ನ ಬೆಂಡೋಲೆನು ಮಾರಿ ದುಡ್ಡು ಕೊಡ್ತೀನಿ.' 'ನಿನ್ನ ಅಳಿಯನಿಗೆ ಅಂತ ದುರ್ಗತಿ ಬಂದಿಲ್ಲ, ಸುಮ್ಕಿರಮ್ಮ' ಎಂದಳು.

ಇವರು ಹೀಗೆ ಮಗು ಯಾಕೆ ಆಗುತ್ತಿಲ್ಲ ಎಂದು ಚರ್ಚೆ ಮಾಡುತ್ತಿರುವಾಗ ಅಲ್ಲಿಗೆ ಚುಕ್ಕಿಯ ಅಪ್ಪ ಕೃಷ್ಣಪ್ಪ ಬಂದ. ಎತ್ತರದ ಆಳು. ಕಪ್ಪು ಅಲ್ಲದ, ಗೋಧಿಬಣ್ಣವೂ ಅಲ್ಲದ ಇವೆರಡೂ ಮಿಶ್ರಣಗೊಂಡಂತಹ ಮೈಯ ಬಣ್ಣ. ಎರಡೂ ಕಿವಿಗಳಲ್ಲಿ ಬಂಗಾರದ ಕಳಾವರದ ಓಲೆಗಳು. 'ಪಾಪ, ಒಂದು ತಂಬಿಗೆ ನೀರ ತಕಬಾರಮ್ಮಿ' ಎಂದು ಮಗಳು ಚುಕ್ಕಿಗೆ ಹೇಳಿದ. ಅವಳು ಒಂದು ತಂಬಿಗೆಯಲ್ಲಿ ನೀರನ್ನು ತಂದು ಕೊಟ್ಟಳು. ಎಲೆಅಡಿಕೆ ಹಾಕಿಕೊಳ್ಳುವ ಹವ್ಯಾಸವಿದ್ದುದರಿಂದ ಬಾಯಿ ಕೆಂಪಗೆ ಇತ್ತು. ಈಗಲೂ ಬಾಯಲ್ಲಿ ಇನ್ನು ಒಂದು ಚೂರು ಎಲೆಅಡಿಕೆ ಇತ್ತು, ನೀರನ್ನು ಬಾಯಲ್ಲಿ ಹಾಕಿಕೊಂಡು ಮುಕ್ಕಳಿಸಿ ಉಗುಳಿ, ಸ್ವಲ್ಪ ನೀರನ್ನು ಕುಡಿದು, ಉಳಿದದ್ದನ್ನು ತಂಬಿಗೆಯಲ್ಲೇ ಬಿಟ್ಟು, ಅದನ್ನು ಬಾಗಿಲ ಬಳಿ ಇಟ್ಟ. ಅವನ ಹೆಂಡತಿ ಲಕ್ಕಮ್ಮ ಹತ್ತಿಯ ಬತ್ತಿಗಳನ್ನು ಹೊಸೆಯುವ ಕೆಲಸವನ್ನು ಮುಗಿಸಿದ್ದಳು. ಅವುಗಳನ್ನು ಕಡಪಕಲ್ಲಿನ ನೆಲದ ಹಾಸಿನ ಮೇಲೆ ಇಟ್ಟು, 'ಗುಡ್ಡೆತಗೆ ಬೋಲು ಮುಳ್ಳು ಬೆಳಿದಿತ್ತೇನ ಅಲ?' ಎಂದು ಕೇಳಿದಳು. 'ಅಯ್ಯೋ ಅದ್ರು ಕತೆ ಏನೇಳ್ತೀಯ, ಸಾಕಾಗಿಹೋತು' ಎಂದ. 'ಮತ್ತೆ ಬೆಳೆಯಾಕಿಲ್ಲವೆ, ಮೂರು ವರ್ಷಕ್ಕೊಂದು ಸಲ ಕ್ಲೀನ್ ಮಾಡೋದು.' ದೀಪಾವಳಿ ಕಳೆದ ಮಾರನೇ ದಿನಕ್ಕೆ ಊರಬಾಗಿಲ ಗುಡ್ಡೆ ಪೂಜೆ. ಈ ಊರನ್ನು ಕಟ್ಟುವಾಗ ಮೊದಲು ಊರಿನ ಕೊನೆಯಲ್ಲಿ ಒಂದು ಕಲ್ಲನ್ನು ಇಟ್ಟು ಅದನ್ನು ಗ್ರಾಮದ ಗಡಿಯೆಂದು ಮತ್ತು ಅಲ್ಲೊಂದು ಕಲ್ಲನ್ನು ಇಟ್ಟು ಊರನ್ನು